ಡಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **17.06.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪಿರ್ಯಾದುದಾರರ ಪರಃ ಶ್ರೀ. ಕೆ.ಎಸ್.ಎಂ. ವಕೀಲರ ಮೂಲಕ ಃ

ನಾನು ನಿವೃತ್ತಿಯಾಗುವ ಸಮಯದಲ್ಲಿ ಮಳವಳ್ಳಿ ಪುರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಮೇ 2012 ರಲ್ಲಿ ನಾನು ನಿವೃತ್ತಿಯಾಗಿರುತ್ತೇನೆ. 2010 ರಿಂದ 2012 ರವರೆಗೆ ಅಂದರೆ ನಿವೃತ್ತಿಯಾಗುವವರೆಗೆ ಮಳವಳ್ಳಿ ಪುರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ಮಳವಳ್ಳಿಯ ಸಿದ್ಧಾರ್ಥ ನಗರದಲ್ಲಿ ಬಾಡಿಗೆ ಮನೆಯಲ್ಲಿ ಕುಟುಂಬದ ಸದಸ್ಯರ ಜೊತೆ ವಾಸವಾಗಿದ್ದೆ. ಎಸ್.ಬಿ.ಎಂ. ನಲ್ಲಿ 2010 ರ ಸುಮಾರಿನಲ್ಲಿ ನಾನು ಚೆಕ್ ಪುಸ್ತಕವನ್ನು ಪಡೆದುಕೊಂಡಿದ್ದೆ. ಅದರಲ್ಲಿ ಎಷ್ಟು ಚೆಕ್‌ಗಳು ಇದ್ದವು ಎಂದು ನಾನು ಪರಿಶೀಲಿಸಿರುವುದಿಲ್ಲ. ಚೆಕ್ ಪುಸ್ತಕದಲ್ಲಿ ಕೌಂಟರ್ ಫೈಲ್ ಇರುತ್ತದೆ ಎಂದರೆ ಸರಿ. ಚೆಕ್‌ನ್ನು ಯಾರಿಗೆ ಕೊಡಲಾಗಿದೆ ಎಂದು ಕೌಂಟರ್ ಫೈಲ್‌ನಲ್ಲಿ ಸಾಮಾನ್ಯವಾಗಿ ಬರೆಯುತ್ತಾರೆ ಎಂದರೆ ಸರಿ.

2. ಸದರಿ ಚೆಕ್ ಪುಸ್ತಕದಲ್ಲಿ ಎಷ್ಟು ಚೆಕ್‌ಗಳು ಉಳಿದಿತ್ತು ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ನಾನು ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರಣ ಚೆಕ್ ಬೌನ್ಸ್ ಪ್ರಕರಣದ ಬಗ್ಗೆ ನನಗೆ ಗೊತ್ತು ಎಂದರೆ ಸರಿ. ಒಬ್ಬರ ಚೆಕ್‌ನ್ನು ಇನ್ನೊಬ್ಬರು ದುರುಪಯೋಗ ಪಡಿಸಿಕೊಂಡರೆ ಪೊಲೀಸ್ ಠಾಣೆಯಲ್ಲಿ ದೂರು ನೀಡಬಹುದು ಎಂದರೆ ಸರಿ. ನನಗೆ ಖಾಲಿ ಚೆಕ್‌ಗಳನ್ನು ಕೊಡುವ ಅಭ್ಯಾಸ ಇರುವುದಿಲ್ಲ. ಆದರೆ ಸಂದರ್ಭ ಆ ರೀತಿ ಇದ್ದ ಕಾರಣ ಕೊಟ್ಟಿರುತ್ತೇನೆ. ಸಿದ್ದರಾಮೇಗೌಡರವರಿಗೆ ಚೆಕ್‌ನ್ನು ನೀಡಿರುತ್ತೇನೆ ಎಂದು ಹೇಳುವ ಸಂಬಂಧವಾಗಿ ಅವರ ಹೆಸರನ್ನು ನಮೂದು ಮಾಡಿ ಚೆಕ್‌ನ್ನು ನೀಡಲು ತೊಂದರೆ ಇತ್ತೇ ಎಂದರೆ ಆ ರೀತಿ ತೊಂದರೆ ಇರಲಿಲ್ಲ ಆದರೆ ಸಂದರ್ಭ ಆ ರೀತಿ ಇದ್ದ ಕಾರಣ ಅವರ ಹೆಸರನ್ನು ನಮೂದು ಮಾಡಿರುವುದಿಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ದಾಖಲೆಯು ಸಿ.ಸಿ. ಸಂಖ್ಯೆ 179/2018 ರಲ್ಲಿ ಸಲ್ಲಿಸಿದ ಜ್ಞಾಪನದ ದೃಢೀಕೃತ ಪ್ರತಿಯಾಗಿದ್ದು, ಅದನ್ನು ನಿಪಿ 6 ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಯಾವುದಾದರೂ ಅರ್ಜಿಯನ್ನು ಸಲ್ಲಿಸಬೇಕಾದರೆ ನಾನು ಓದಿ ಸಲ್ಲಿಸುತ್ತೇನೆ ಎಂದರೆ ಸರಿ. ಆದರೆ ನಿಪಿ 6 ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನಿಪಿ 6 ಕ್ಕೆ ನಾನು ಮತ್ತು ನನ್ನ ವಕೀಲರು ಸಹಿ ಮಾಡಿರುತ್ತೇವೆ ಎಂದರೆ ಸರಿ. ನಿಪಿ 6 ದಾಖಲೆಯನ್ನು ಸಲ್ಲಿಸುವ ಕಾಲಕ್ಕೆ ನಾನು ನ್ಯಾಯಾಲಯದಲ್ಲಿ ಹಾಜರಿದ್ದೆ. ನನ್ನ ಸಮಕ್ಷಮ ಉಭಯ ಪಕ್ಷಗಾರರು ಮತ್ತು ನಮ್ಮ ಪರ ವಕೀಲರು ನಿಪಿ 6

ನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಪಿ 6 ನ್ನು ಸಲ್ಲಿಸುವ ಕಾಲಕ್ಕೆ ನಾನು ತಕರಾರು ಮಾಡಿರುವುದಿಲ್ಲ. ನಿಪಿ 6 ರಲ್ಲಿ ಯಾವುದೇ ಚೆಕ್‌ನ ನಂಬರ್‌ನ್ನು ನಮೂದು ಮಾಡಿರುವುದಿಲ್ಲ.

3. ಸಿದ್ದರಾಮೇಗೌಡವರು ನನ್ನ ವಿರುದ್ದ ಸಲ್ಲಿಸಿದ್ದ ಚೆಕ್ ಪ್ರಕರಣದಲ್ಲಿ ನಿಪಿ 6 ಜಂಟಿ ಮೆಮೋವನ್ನು ಸಲ್ಲಿಸಲಾಗಿತ್ತು ಎಂದರೆ ಸರಿ. ನಿಪಿ 6 ರ 02 ಪುಟಗಳಲ್ಲಿ ನನ್ನ ಸಹಿಗಳು ಇರುತ್ತವೆ ಎಂದರೆ ಸರಿ. ನಾನು ದಾಖಲೆಗೆ ಸಹಿ ಮಾಡುವ ಪೂರ್ವದಲ್ಲಿ ಓದುತ್ತೇನೆ ಎಂದರೆ ಸರಿ. ಆದರೆ ನಿಪಿ 6 ನ್ನು ಓದಿರುವುದಿಲ್ಲ. ನಾನು 5 ಲಕ್ಷ ಮೊತ್ತವನ್ನು ಪಾವತಿ ಮಾಡುತ್ತೇನೆ ಎಂದು ಮತ್ತು ಪ್ರತಿ ತಿಂಗಳು 50 ಸಾವಿರ ರೂಪಾಯಿ ಪಾವತಿ ಮಾಡುತ್ತೇನೆ ಎಂದು ನಿಪಿ 6 ರಲ್ಲಿ ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 6 ನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ದಿ: 22.10.2019 ರಂದು ನಿಪಿ 6 ಬಗ್ಗೆ ನನಗೆ ತಿಳಿದಿರುತ್ತದೆ. ನಿಪಿ 6 ರಲ್ಲಿ ನಮೂದು ಮಾಡಿರುವಂತೆ ನಾನು ಹಣವನ್ನು ಪಾವತಿ ಮಾಡದ ಕಾರಣ ನನಗೆ ಸದರಿ ದಾಖಲೆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆ ಬಗ್ಗೆ ಗೊತ್ತಿಲ್ಲವೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದರಾಮೇಗೌಢರವರಿಂದ ಪಡೆದ ಮೊತ್ತವನ್ನು ಮತ್ತು ಕರಿಯಪ್ಪರವರಿಂದ ಪಡೆದ ಮೊತ್ತವನ್ನು ವಾಪಸ್ ಕೊಡಬಾರದೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈಗ ನೋಡುತ್ತಿರುವ ನಿಪಿ 5 ರಲ್ಲಿ ಇರುವ ಸಹಿ ನನ್ನದಾಗಿರುತ್ತದೆ. ನಿಪಿ 3 ರ ನೋಟೀಸ್‌ಗೆ ನಾನು ಪ್ರತ್ಯುತ್ತರ ನೀಡಿರುವುದಿಲ್ಲ, ಏಕೆಂದರೆ ನೋಟೀಸ್‌ನ ಪ್ರತಿಯನ್ನು ನಾನು ಜೇಬಿನಲ್ಲಿಟ್ಟಿದ್ದು, ನಮ್ಮ ಮನೆಯವರು ಸದರಿ ಬಟ್ಟೆಯನ್ನು ತೊಳೆಯುವಾಗ ಸದರಿ ಪೇಪರ್ ನಾಶವಾಗಿರುತ್ತದೆ. ನಾನು ನೋಟೀಸ್‌ನ್ನು ಓದಿ ಆ ನಂತರ ಜೇಬಿನಲ್ಲಿ ಇಟ್ಟುಕೊಂಡಿರುತ್ತೇನೆ. ಸದರಿ ನೋಟೀಸ್‌ನಲ್ಲಿ ಚೆಕ್ ನಂಬರ್ ಮತ್ತು ಯಾರು ನೋಟೀಸ್‌ನ್ನು ಕಳುಹಿಸಿರುತ್ತಾರೆ ಹಾಗೂ ಚೆಕ್ ಮೊತ್ತದ ಬಗ್ಗೆ ವಿವರ ಇತ್ತು ಎಂದರೆ ಸರಿ. ನೋಟೀಸ್ ನ ಪ್ರತಿ ಮೇಲೆ ಹೇಳಿದಂತೆ ನೀರಿಯಲ್ಲಿ ನೆನೆದುಹೋದ ಕಾರಣ ನಾನು ಪ್ರತ್ಯುತ್ತರ ನೀಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸದರಿ ಸಂಗತಿಯನ್ನು ಬರೆಸಿರುವುದಿಲ್ಲ. ನಾನು ಈ ವಿಚಾರವನ್ನು ಈ ಪ್ರಕರಣದಲ್ಲಿ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ.

5. ನಾನು ನ್ಯಾಯಾಲಯದ ಸಮನ್ಸ್ ಆಧಾರದ ಮೇಲೆ ಹಾಜರಾಗಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹಾಜರಾದ ನಂತರ ಈ ಪ್ರಕರಣದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಆ ರೀತಿ ಗೊತ್ತಾದ ನಂತರ ನಾನು ಪಿರ್ಯಾದುದಾರರ ವಿರುದ್ದ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ನ್ಯಾಯಾಲಯದಲ್ಲಿ ಪ್ರಕರಣ ಇದ್ದ ಕಾರಣ

ಕ್ರಮ ತೆಗೆದುಕೊಂಡಿರುವುದಿಲ್ಲ. ನಾನು ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ನ್ಯಾಯಾಲಯದಲ್ಲಿ ಪ್ರಕರಣ ಇರುವ ಕಾರಣ ನಾನು ಕ್ರಮ ತೆಗೆದುಕೊಂಡಿರುವುದಿಲ್ಲ. ಯಾವ ಕಾರಣದಿಂದ ಪ್ರತ್ಯುತ್ತರ ನೀಡಲಿಲ್ಲವೆಂದು ಪ್ರಾಸಾ 1 ರವರ ಪಾಟೀ ಸವಾಲಿನಲ್ಲಿ ಕೇಳಿರುವುದಿಲ್ಲ. ಫಿರ್ಯಾದುದಾರರು ಕಳುಹಿಸಿದ ನೋಟೀಸ್ ನನಗೆ ಜಾರಿಯಾಗಿರುತ್ತದೋ ಇಲ್ಲವೋ ಎಂಬ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಸಿದ್ದರಾಮೇಗೌಡರವರ ವಿರುದ್ಧ ಯಾವ ಕಾರಣದಿಂದ ಕ್ರಮ ತೆಗೆದುಕೊಳ್ಳಲು ಆಗಲಿಲ್ಲವೆಂದು ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ.

6. ನಿಪಿ 1 ರಲ್ಲಿರುವ ಸಹಿ ನನ್ನದಾಗಿರುತ್ತದೆ. ನಿಪಿ 1 ರ ಬರವಣಿಗೆ ಆದ ನಂತರ ನಾನು ನಿಪಿ 1 ಎ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಚೆಕ್ ಮತ್ತು ನಿಪಿ 1 ಎ ಸಹಿ ನನ್ನದಾಗಿರುವುದರಿಂದ ಸದರಿ ಚೆಕ್‌ನ್ನು ಯಾರು ಭರ್ತಿ ಮಾಡಿರುತ್ತಾರೆ ಎಂದು ನಾನು ಹೇಳಬೇಕೆ ಹೊರತು ಫಿರ್ಯಾದುದಾರರು ಅಲ್ಲ ಎಂದರೆ ನಾನು ಭರ್ತಿ ಮಾಡಿರುವುದಿಲ್ಲ. ಫಿರ್ಯಾದುದಾರರ ಭರ್ತಿ ಮಾಡಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ. ಫಿರ್ಯಾದುದಾರರು ನಿಪಿ 1 ನ್ನು ಭರ್ತಿ ಮಾಡಿರುವ ಬಗ್ಗೆ ನಾನು ನೋಡಿರುವುದಿಲ್ಲ. ಫಿರ್ಯಾದುದಾರರಿಗೆ ಸಹಿ ಮಾಡುವುದನ್ನು ಹೊರತುಪಡಿಸಿ ಅವರಿಗೆ ಬರೆಯಲು ಗೊತ್ತಿಲ್ಲ ಎಂದರೆ ಅವರು ನನಗೆ ಪರಿಚಯವಿಲ್ಲದ ಕಾರಣ ಅವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಫಿರ್ಯಾದುದಾರರು ನನಗೆ ಪರಿಚಯವಿಲ್ಲ ಎಂಬ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದರನ್ನು ಹೊರತುಪಡಿಸಿ ಅದರ ಪೂರ್ವದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

7. ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿಕೊಂಡರೆ ಚೆಕ್‌ಗಳನ್ನು ಬ್ಯಾಂಕ್‌ಗೆ ವಾಪಸ್ ನೀಡಬೇಕು ಎಂದರೆ ನನಗೆ ಆ ವಿಚಾರ ಗೊತ್ತಿಲ್ಲ. ನನ್ನ ಖಾತೆಯನ್ನು ಮುಕ್ತಾಯಗೊಳಿಸಲು ನಾನು ಬ್ಯಾಂಕ್‌ಗೆ ಮನವಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಬ್ಯಾಂಕ್ ಖಾತೆಯು ಯಾವ ಕಾರಣಕ್ಕಾಗಿ ಮುಕ್ತಾಯವಾಗಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ನಾನು ಸದರಿ ಬ್ಯಾಂಕ್ ಖಾತೆಯಲ್ಲಿ ವ್ಯವಹಾರ ಮಾಡದ ಕಾರಣ ಅದು ಮುಕ್ತಾಯವಾಗಿರುತ್ತದೆ.

8. ನಾನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ನಮ್ಮ ಇಲಾಖೆಯ ಅನುಮತಿ ಪಡೆದಿರುವುದಿಲ್ಲ ಏಕೆಂದರೆ ನಾನು ನಿವೃತ್ತಿಯಾದ ನಂತರ ಆ ರೀತಿ ಕ್ರಯಕ್ಕೆ ಪಡೆದಿರುತ್ತೇನೆ. ನಿವೃತ್ತಿಯಾದ ನಂತರ ಸರ್ಕಾರದಿಂದ ನನಗೆ 10 -12 ಲಕ್ಷ ರೂಪಾಯಿ ಬಂದಿರುತ್ತದೆ. ಅದನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ನಿವೃತ್ತಿಯಾದ 2-3 ತಿಂಗಳಿನಲ್ಲಿ ಸದರಿ ಮೊತ್ತ ಬಂದಿರುತ್ತದೆ. ನಾನು ನಿವೃತ್ತಿಯಾದ ಸುಮಾರು

ಒಂದುವರೆ ವರ್ಷಕ್ಕೆ ನಿವೇಶನವನ್ನು ಖರೀದಿ ಮಾಡಿರುತ್ತೇನೆ. ನಾನು ನಿವೇಶನ ಖರೀದಿ ಮಾಡಿದ ದಿನಾಂಕ, ಈ ಪ್ರಕರಣದ ಚೆಕ್ ನಂಬರ್ ಮತ್ತು ಸಿ.ಸಿ. ನಂಬರ್‌ನ್ನು ನನ್ನ ಅಂಗೈಯಲ್ಲಿ ಈ ದಿನ ಬರೆದುಕೊಂಡಿರುತ್ತೇನೆ. ನಾನು ನಿವೃತ್ತಿಯಾಗುವ ವರೆಗೆ ನಿವೇಶನವನ್ನು ಖರೀದಿ ಮಾಡುವಷ್ಟು ಆದಾಯವನ್ನು ವೇತನದ ಮೂಲಕ ಹೊಂದಿರಲಿಲ್ಲ ಎಂದರೆ ಸರಿ. ನಾನು ಕರ್ತವ್ಯದಲ್ಲಿದ್ದಾಗ ಆದಾಯ ತೆರಿಗೆಯನ್ನು ಪಾವತಿ ಮಾಡಿರುವುದಿಲ್ಲ. ನಿವೃತ್ತಿಯಾದ ನಂತರ ಸಹ ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿಲ್ಲ. ನನ್ನ ಪತ್ನಿಯು ಸಹ ಆದಾಯ ತೆರಿಗೆಯನ್ನು ಪಾವತಿ ಮಾಡುವುದಿಲ್ಲ.

9. ಕೃಷಿ ಜಮೀನಿನಿಂದ ನನಗೆ ಆದಾಯ ಬರುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮಗಳು 2008 ರಲ್ಲಿ ನೌಕರಿಗೆ ಸೇರಿರುತ್ತಾರೆ. 2019 ರಲ್ಲಿ ನಾನು ಮಂಡ್ಯದಲ್ಲಿ ಮನೆ ಕಟ್ಟಿಸಿರುತ್ತೇನೆ. ಸುಮಾರು ಒಂದುವರೆ ವರ್ಷ ಕಟ್ಟಡದ ಕಾಮಗಾರಿ ನಡೆದಿರುತ್ತದೆ. ಅದು ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಮನೆಯನ್ನು ಕಟ್ಟಿಸಲು 35 ರಿಂದ 40 ಲಕ್ಷ ಖರ್ಚಾಗಿರುತ್ತದೆ. ನಾನು ಬ್ಯಾಂಕ್‌ನಿಂದ ಸಾಲ ಪಡೆದು ಮನೆಯನ್ನು ಕಟ್ಟಿಸಿದ್ದು, ಈಗಲೂ ಪ್ರತಿತಿಂಗಳು ಸಾಲ ಪಾವತಿ ಮಾಡುತ್ತಿದ್ದೇನೆ. 2018 ರಲ್ಲಿ ನನ್ನ ಉಳಿತಾಯ ಖಾತೆಯಲ್ಲಿ ಹಣ ಇರಲಿಲ್ಲ. ನಾನು ಹಾಜರುಪಡಿಸಿರುವ ನಿಡಿ 2 ದಾಖಲೆಯ ಪ್ರಕಾರ ನನ್ನ ಖಾತೆಗೆ ಬಂದ ಎಲ್ಲಾ ಹಣವನ್ನು 2-3 ದಿನಗಳಲ್ಲಿ ಡ್ರಾ ಮಾಡಿದ್ದು, ಕೊನೆಯಲ್ಲಿ 900 ರೂಪಾಯಿ ಉಳಿದಿತ್ತು ಎಂದರೆ ಸರಿ. ದಿ: 24.03.2026 ರಂದು ನನ್ನ ಖಾತೆಯಲ್ಲಿ ನಿಡಿ 2 ರ ಪ್ರಕಾರ 957 ರೂಪಾಯಿ ಉಳಿದಿರುತ್ತದೆ ಎಂದರೆ ಸರಿ. ನನಗೆ ಯಾವುದೇ ರೀತಿಯ ಕೃಷಿ ಆದಾಯ ಇಲ್ಲದೆ ಇದ್ದರೂ ನನಗೆ ಹಣ ಬಂದ ನಂತರ ಖರ್ಚು ಮಾಡುತ್ತಿದ್ದು ಉಳಿತಾಯ ಈಗಲೂ ಇಲ್ಲ ಎಂದರೆ ಸರಿಯಲ್ಲ.

10. ನಾನು 2017-18 ನೇ ಸಾಲಿನ ನನ್ನ ಮಗಳ ವೇತನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯ ಆಧಾರದ ಮೇಲೆ ನನ್ನ ಮಗಳ ವಿಚಾರಣೆ ಮಾಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಹಾಜರುಪಡಿಸಿರುವ ಸರ್ವೆ ನಂ. 304/ ಪಿ2 ಪಹಣಿಯು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ನನ್ನ ತಂದೆಗೆ ಸೇರಿದ್ದು ಎಂದರೆ ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ. ನನ್ನ ತಂದೆಗೆ ನಾವು 3 ಜನ ಮಕ್ಕಳಿರುತ್ತೇವೆ. ನಾನು ಸದರಿ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಕುಟುಂಬಕ್ಕೆ ಆದಾಯ ಇಲ್ಲದ ಕಾರಣ ನಾವೇ ಸಾಲ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಹಣವನ್ನು ವಾಪಸ್ ಕೊಡಬೇಕಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದರಾಮೇಗೌಢರವರಿಗೂ ಮತ್ತು ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯ ಹತ್ತಿರ ಸಾಲ ಪಡೆದು ನಿಪಿ 1 ನ್ನು

ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ಮೇರೆಗೆ ಅವರು ಚೆಕ್‌ನ್ನು ಬ್ಯಾಂಕ್‌ಗೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಖಾತೆಯನ್ನು ಮುಕ್ತಾಯ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರಿಗೆ ಕೊಡಬೇಕಾದ ಹಣವನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.